ನನಗೂ ಇಷ್ಟವಾದಾಗ ಒಪ್ಪಿಕೊಳ್ಳದೆ ಹೇಗಿರಲಿ?' ಎಂದು ಪ್ರಶ್ನಿಸುವ ರಚಿತಾ ತಮಗೆ ಇಷ್ಟವಾಗದ ಕನಿಷ್ಠ ಇಪ್ಪತ್ತೈದು ಕಥೆಗಳನ್ನು ಈ ಲಾಕ್‌ಡೌನ್ ಸಮಯದಲ್ಲಿಯೇ ತಿರಸ್ಕರಿಸಿದ್ದಾರಂತೆ.

ಕನ್ನಡದಲ್ಲಿಯಷ್ಟೇ ಅಲ್ಲ, ಬೇರೆ ಭಾಷೆಗಳಲ್ಲಿಯೂ ಅನನ್ಯವಾದ ಪಾತ್ರಗಳಲ್ಲಿಯೇ ಕಾಣಿಸಿಕೊಳ್ಳಬೇಕು ಎಂಬುದು ಅವರ ಛಲ. 'ಎಲ್ಲರೂ ಮಾಡುವುದನ್ನೇ ನಾನೂ ಮಾಡಿದರೆ ಏನು ಚೆನ್ನ? ಅಲ್ಲಿಗೆ ಹೋಗಿ ಏನಾದರೂ ಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಳ್ಳಬೇಕು. ಪ್ರಯೋಗಶೀಲ ಸಿನಿಮಾ ಮೂಲಕವೇ ಪ್ರವೇಶ ಪಡೆಯಬೇಕು ಎಂದು ನಿರ್ಧರಿಸಿದ್ದೇನೆ' ಎನ್ನುವ ಅವರಿಗೆ ಅಂಥ ಅವಕಾಶಗಳು ಬಂದೇ ಬರುತ್ತವೆ ಎಂಬ ನಂಬಿಕೆಯೂ ಇದೆ.

ಹತ್ತು ಹಲವು ಪಾತ್ರಗಳನ್ನು ಏಕಕಾಲಕ್ಕೆ ತಲೆಯಲ್ಲಿ ತುಂಬಿಕೊಂಡಿರುವ ರಚಿತಾ ಸಂಪೂರ್ಣ ನಿರ್ದೇಶಕರ ನಟಿ. 'ನನ್ನ ಮ್ಯಾನೇಜರ್ ಕಾಲ್ ಮಾಡ್ತಾರೆ. ಶೂಟಿಂಗ್ ಜಾಗಕ್ಕೆ ಹೋದಾಗಲೇ ಏನು ಶೂಟಿಂಗ್ ಮಾಡೋದು ಎಂದು ನನಗೆ ಗೊತ್ತಾಗೋದು. ಒಮ್ಮೆ ಮೇಕಪ್ ಹಾಕಿಕೊಂಡು ಕ್ಯಾಮೆರಾ ಎದುರು ಹೋಗಿ ನಿಂತಾಗ ನಾನು ಆ ಪಾತ್ರವೇ ಆಗಿಬಿಟ್ಟಿರುತ್ತೇನೆ. ಅದನ್ನು ಬಿಟ್ಟರೆ ಇಡೀ ದಿನ ಅದರ ಬಗ್ಗೆಯೇ ಯೋಚಿಸುವುದಿಲ್ಲ. ಟೆನ್ಷನ್ ಜಾಸ್ತಿ ಮಾಡಿಕೊಂಡರೆ ಎಲ್ಲ ಪಾತ್ರಗಳನ್ನು ನಿರ್ವಹಿಸುವುದು ಕಷ್ಟವಾಗಿಬಿಡುತ್ತದೆ' ಎನ್ನುತ್ತಾರೆ ಅವರು.

'ಏಕ್ ಲವ್ ಯಾ', '100', 'ಲವ್ ಯೂ ರಚ್ಚು', 'ಶಬರಿ ಸರ್ಚಿಂಗ್ ಫಾರ್ ರಾವಣ' ಹೀಗೆ ಹಲವು ವಿಭಿನ್ನ ಪಾತ್ರಗಳಲ್ಲಿ ನಟಿಸುತ್ತಿರುವ ರಚಿತಾ ಕಾಲ್‌ಶೀಟ್‌ಗೆ ಈಗ ದರ್ಶನ್ ಅವರ 'ಕ್ರಾಂತಿ' ಸಿನಿಮಾ ಕೂಡ ಸೇರಿದೆ.

ಒಂದು ಕಾಲನ್ನು ಸ್ಟಾರ್ ನಟರ ಸಿನಿಮಾ ದೋಣಿಯ ಮೇಲೂ ಇನ್ನೊಂದು ಕಾಲನ್ನು ಪ್ರಯೋಗಶೀಲರ ಬಿದಿರು ತೆಪ್ಪದ ಮೇಲೆಯೂ ಇಟ್ಟು ನದಿಯಲ್ಲಿ ಸಾಗುತ್ತಿರುವ ಅವರ ಮುಂದಿನ ಪ್ರಯಾಣ ಕುತೂಹಲವನ್ನಂತೂ ಹುಟ್ಟಿಸುತ್ತದೆ. ■



## ಶಿವಾಜಿಗೆ ಮೇಘನಾ ಬೆಂಬಲ!

ಕಳೆದ ವರ್ಷ ಬಿಡುಗಡೆಯಾಗಿದ್ದ ರಮೇಶ್ ಅರವಿಂದ್ ಅಭಿನಯದ 'ಶಿವಾಜಿ ಸುರತ್ಕಲ್' ಸಿನಿಮಾದ ಬಗ್ಗೆ ಮೆಚ್ಚುಗೆಯ ಮಾತುಗಳು ಕೇಳಿಬಂದಿದ್ದವು. ಅದೇ ಪ್ರೋತ್ಸಾಹವನ್ನು ಇಂಧನವಾಗಿಸಿಕೊಂಡು ನಿರ್ದೇಶಕ ಆಕಾಶ್ ಶ್ರೀವತ್ಸ ಅವರು ಅದರ ಎರಡನೇ ಭಾಗವನ್ನೂ ತೆರೆಗೆ ತರುವ ನಿರ್ಧಾರ ಕೈಗೊಂಡಿದ್ದರು.

ಈ ಚಿತ್ರದಲ್ಲಿ ರಾಧಿಕಾ ನಾರಾಯಣ್, ರಾಘು ರಮಣಕೊಪ್ಪ, ವಿದ್ಯಾಮೂರ್ತಿ ಅವರು ಮುಖ್ಯ ಪಾತ್ರದಲ್ಲಿ ನಟಿಸಿದ್ದರು. ಎರಡನೇ ಭಾಗದಲ್ಲಿಯೂ ಇದೇ ನಟವರ್ಗ ಅವವೇ ಪಾತ್ರಗಳಲ್ಲಿ ನಟಿಸಲಿದ್ದಾರಂತೆ. ಇತ್ತೀಚೆಗೆ ಈ ತಾರಾಬಳಗದಲ್ಲಿ ಹೊಸದೊಂದು ಹೆಸರು ಸೇರ್ಪಡೆಯಾಗಿದೆ. ಅದು ಮೇಘನಾ ಗಾಂವ್ಕಾರ್ ಅವರದ್ದು.

ಮೇಘನಾ ಗಾಂವ್ಕಾರ್ ಈ ಚಿತ್ರದಲ್ಲಿ ಕ್ರೈಂ ಬ್ರಾಂಚ್ ಡಿಸಿಪಿ ಅಧಿಕಾರಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ದೀಪಾ ಕಾಮತ್ ಎನ್ನುವುದು ಅವರ ಪಾತ್ರದ ಹೆಸರು. ಇದೇ ಮೊದಲ ಬಾರಿಗೆ ಮೇಘನಾ ಖಾಕಿ ತೊಟ್ಟು ತೆರೆಯ ಮೇಲೆ ಕಾಣಿಸಿಕೊಳ್ಳುತ್ತಿದ್ದು, ಈ ಪಾತ್ರಕ್ಕೆ ಸಾಕಷ್ಟು ಪ್ರಾಮುಖ್ಯವೂ ಇದೆಯಂತೆ. ಚಿತ್ರದ ನಾಯಕ ಶಿವಾಜಿಯ ಬೆನ್ನೆಲುಬಾಗಿ ನಿಂತು, ಬೆಂಬಲಿಸುವ ಮೇಲಧಿಕಾರಿಯಾಗಿ ಮೇಘನಾ ಕಾಣಿಸಿಕೊಂಡಿದ್ದಾರೆ.

ಚಿತ್ರದ ಸ್ಕ್ರಿಪ್ಟ್ ಕೆಲಸ ಮುಗಿದಿದ್ದು ಇನ್ನೂ ಕೆಲವು ಮುಖ್ಯ ಪಾತ್ರಗಳಿಗೆ ಕಲಾವಿದರ ಆಯ್ಕೆ ನಡೆಯಬೇಕಿದೆ. ಸದ್ಯದಲ್ಲಿಯೇ ಚಿತ್ರದ ಮುಹೂರ್ತ ನಡೆಸಿ ಚಿತ್ರೀಕರಣ ಆರಂಭಿಸುವ ಆಲೋಚನೆ ಚಿತ್ರತಂಡದ್ದು. ರೇಖಾ ಕೆ.ಎನ್ ಮತ್ತು ಅನುಪ್ ಗೌಡ ಈ ಚಿತ್ರಕ್ಕೆ ಹಣ ಹೂಡುತ್ತಿದ್ದಾರೆ. ■

## ತಯಾರಾಗ್ತಿದೆ 'ವೆಡ್ಡಿಂಗ್ ಗಿಫ್ಟ್'



'ವೆಡ್ಡಿಂಗ್ ಗಿಫ್ಟ್' ಎಂಬ ಹೆಸರಿನ ಸಿನಿಮಾವೊಂದು ಸದ್ದಿಲ್ಲದೇ ಸೆಟ್ಟೇರಿದೆ. ನಿಶಾನ್ ನಾಣಯ್ಯ ಅವರು ನಾಯಕನಾಗಿ ನಟಿಸುತ್ತಿರುವ ಈ ಚಿತ್ರಕ್ಕೆ ಸೋನು ಗೌಡ ನಾಯಕಿ. ಮತ್ತೊಂದು ಬಹುಮುಖ್ಯವಾದ ವಿಶೇಷ ಪಾತ್ರದಲ್ಲಿ ನಟಿ ಪ್ರೇಮಾ ಕೂಡ ಅಭಿನಯಿಸುತ್ತಿದ್ದಾರೆ.

'ವೆಡ್ಡಿಂಗ್ ಗಿಫ್ಟ್'ಗೆ ಹಣ ಹಾಕಿ, ನಿರ್ದೇಶಿಸುತ್ತಿರುವವರು ವಿಕ್ರಂ ಪ್ರಭು. ನವೆಂಬರ್ 15ರಿಂದ ಚಿತ್ರೀಕರಣ ಆರಂಭಿಸಿ ಬೆಂಗಳೂರು, ಉಡುಪಿ, ಮಂಗಳೂರು, ಮೈಸೂರುಗಳಲ್ಲಿ ಚಿತ್ರೀಕರಣ ಮಾಡುವ ಯೋಜನೆಯನ್ನು ಚಿತ್ರತಂಡ ಹಾಕಿಕೊಂಡಿದೆ.

ಇತ್ತೀಚೆಗೆ ಈ ಚಿತ್ರಕ್ಕಾಗಿ ಸೋನು ಗೌಡ ಮತ್ತು ಪ್ರೇಮಾ ಅವರ ಫೋಟೊಶೂಟ್ ಕೂಡ ಮಾಡಲಾಗಿದೆ. ಚಿತ್ರಕ್ಕೆ ಸಂಜಯ್ ಶರ್ಮ, ಅಭಯ್ ದೇವ್ ಪುರಿ, ಆಶೀಶ್ ಪಾವಸ್ಕರ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ಬಾಲಚಂದ್ರ ಪ್ರಭು ಸಂಗೀತ ನೀಡಿದ್ದಾರೆ. ಉದಯಲೀಲ ಅವರು ಛಾಯಾಗ್ರಹಣ ಮಾಡಿದ್ದಾರೆ. ಪವಿತ್ರ ಲೋಕೇಶ್ ಕೂಡ ಒಂದು ಮುಖ್ಯಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ■